I/617763/2024

ಕರ್ನಾಟಕ ಸರ್ಕಾರ
**ತಾಂತ್ರಿಕ ಶಿಕ್ಷಣ ಇಲಾಖೆ**

DTE-ADMI0EST(10)/12/2024/323

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 04.06.2024

# ಹಿಂಬರಹ

ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರುಗಳಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ ರೂ.15600-39100+6000 ಎಜಿಪಿ ರಿಂದ ವೇತನ ಶ್ರೇಣಿ ರೂ.15600-39100+7000ಗೆ ಎ.ಜಿ.ಪಿ ಮಂಜೂರು ಮಾಡಿ ಆದೇಶಿಸಿರುವ ಸರ್ಕಾರದ ಆದೇಶ ಸಂಖ್ಯೆ:ಇಡಿ/75/ಟಿಇಸಿ/2024 ದಿನಾಂಕ:16.03.2024 ಅನ್ನು ಸಂಬಂಧಪಟ್ಟ ಸಂಸ್ಥೆಯ ಪ್ರಾಂಶುಪಾಲರು ಮತ್ತು ಸಹಾಯಕ ಪ್ರಾಧ್ಯಾಪಕರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ರವಾನಿಸಿದೆ.

Signed by
Prasanna Halappa
Date: 07-06-2024 15:31:20
ನಿರ್ದೇಶಕರು,
ತಾಂತ್ರಿಕ ಶಿಕ್ಷಣ ಇಲಾಖೆ.

**ಇವರಿಗೆ:-**

1. ಮಹಾಲೇಖಪಾಲರು, ಎ&ಇ, ಬೆಂಗಳೂರು.
2. ಸಂಬಂಧಪಟ್ಟ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ - ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
3. ಸಂಬಂಧಪಟ್ಟ ಸಹಾಯಕ ಪ್ರಾಧ್ಯಾಪಕರುಗಳಿಗೆ (ಪ್ರಾಂಶುಪಾಲರ ಮುಖಾಂತರ).
4. ನೋಡಲ್ ಅಧಿಕಾರಿ, ಇ-ಆಡಳಿತ, ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು (ವೆಬ್‌ಸೈಟ್‌ನಲ್ಲಿ ಅಳವಡಿಸಲು)

ಪ್ರತಿ:-

1. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ(ತಾಂತ್ರಿಕ), ಬಹುಮಹಡಿ ಕಟ್ಟಡ, ಬೆಂಗಳೂರು.
2. ಆಪ್ತ ಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
3. ಆಪ್ತ ಶಾಖೆ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಆಪ್ತ ಶಾಖೆ, ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ಹೆಚ್ಚುವರಿ ಪ್ರತಿ ಕಡತಕ್ಕೆ

# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ: ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರು, ಗ್ರಂಥಪಾಲಕರುಗಳಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ ಎ.ಜಿ.ಪಿ ಮಂಜೂರು ಮಾಡುವ ಬಗ್ಗೆ.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರ ಆಪ್ತ ಶಾಖೆ.
ಸಂಖ್ಯೆ 1747
ದಿನಾಂಕ 18 MAR 2024

**ಓದಲಾಗಿದೆ:-**

1. ಸರ್ಕಾರದ ಆದೇಶ ಸಂಖ್ಯೆ:ಇಡಿ 96 ಡಿಟಿಇ 2010, ದಿನಾಂಕ:07.03.2011.
2. ಸರ್ಕಾರದ ಆದೇಶ ಸಂಖ್ಯೆ:ಇಡಿ 20 ಡಿಟಿಇ 2018, ದಿನಾಂಕ:08.12.2020.
3. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರ ಏಕ ಕಡತ ಸಂಖ್ಯೆ: DTE-ADMI0EST(10)/12/2024(1340101)

DIRECTOR / EST-10
18 MAR 2024

**ಪ್ರಸ್ತಾವನೆ:-**

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ 6ನೇ ಎಐಸಿಟಿಇ ವೇತನ ಶ್ರೇಣಿಗಳನ್ನು ದಿನಾಂಕ:01.01.2006ರಿಂದ ಅನ್ವಯಿಸುವಂತೆ ವಿಸ್ತರಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ (2)ರ ಸರ್ಕಾರದ ಆದೇಶದಲ್ಲಿ ಸರ್ಕಾರಿ/ಖಾಸಗಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಎ.ಐ.ಸಿ.ಟಿ.ಇ ವೇತನ ಶ್ರೇಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಎ.ಪಿ.ಐ. ಅಂಕಗಳ ಆಧಾರಿತ ವೃತ್ತಿ ಪದೋನ್ನತಿ (CAS) ಸೌಲಭ್ಯವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ. All India Council for Technical Education (Career Advancement scheme for the teachers and other Academic staff in Technical Institutions)(Degree) Regulations, 2012ರ ದಿನಾಂಕ:08.11.2012ರಲ್ಲಿನ ನಿಯಮಗಳಲ್ಲಿ ವಿಧಿಸಿರುವ ಎ.ಪಿ.ಐ ಆಧಾರಿತ ಅಂಕಗಳ ಪರಿಗಣನೆಯಿಂದ ದಿನಾಂಕ:07.11.2015ರವರೆಗೆ ವಿನಾಯಿತಿ ನೀಡಿ ಕೆಲವು ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ವೃತ್ತಿ ಪದೋನ್ನತಿ (CAS) ಸೌಲಭ್ಯವನ್ನು ಮಂಜೂರು ಮಾಡಲು ಆದೇಶಿಸಲಾಗಿದೆ.

18/3

ಮೇಲೆ ಓದಲಾದ (3)ರ ಏಕ ಕಡತದಲ್ಲಿ, ಸರ್ಕಾರದ ಪತ್ರ ಸಂಖ್ಯೆ:ಇಡಿ/186/ಡಿಟಿಇ/2020, ದಿನಾಂಕ:30.09.2021ರಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ ಸ್ಥಾನೀಕರಣ ಮುಂಬಡ್ತಿ ಮತ್ತು ಎ.ಜಿ.ಪಿ. ಮಂಜೂರು ಮಾಡುವ ಪ್ರಸ್ತಾವನೆಗಳನ್ನು ಪರಿಶೀಲಿಸಲು ಪ್ರತ್ಯೇಕ ಸ್ಥಾನೀಕರಣ ಸಮಿತಿಯನ್ನು ರಚಿಸುವ ಅಧಿಕಾರವನ್ನು ಆಯುಕ್ತರಿಗೆ ಪ್ರತ್ಯಾಯೋಜಿಸಲಾಗಿದೆ. ಅದರನ್ವಯ, ತಾಂತ್ರಿಕ ಶಿಕ್ಷಣ ಇಲಾಖೆ ಕಛೇರಿ ಆದೇಶ ಸಂಖ್ಯೆ: ADMIN0/EST/10/02/2021, ದಿನಾಂಕ:09.05.2022 ರಲ್ಲಿ ಸ್ಥಾನೀಕರಣ ಸಮಿತಿಯನ್ನು ರಚಿಸಲಾಗಿರುತ್ತದೆ. ದಿನಾಂಕ:22.01.2024ರಂದು ನಡೆದ ಸ್ಥಾನೀಕರಣ ಮತ್ತು ಸ್ಕ್ರೀನಿಂಗ್ ಕಮಿಟಿಯು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 31 ಜನ ಸಹಾಯಕ ಪ್ರಾಧ್ಯಾಪಕರು/ ಸಹಾಯಕ ನಿರ್ದೇಶಕರು/ ದೈಹಿಕ ಶಿಕ್ಷಕರು/ ಗ್ರಂಥಪಾಲಕರುಗಳ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ 6ನೇ ಎಐಸಿಟಿಇ ವೇತನ ಶ್ರೇಣಿ ರೂ.15600-39100+ ಎ.ಜಿ.ಪಿ. ರೂ.6000/-ರಿಂದ ಎ.ಜಿ.ಪಿ. ರೂ.7000/- ಪಡೆಯಲು ನಿಯಮಾನುಸಾರ ಅರ್ಹರಿರುವ ಬಗ್ಗೆ, ಪರಿಶೀಲಿಸಿ ಶಿಫಾರಸ್ಸು ಮಾಡಿರುತ್ತದೆ. ಅದರಂತೆ, ಸದರಿ 31 ಜನ ಬೋಧಕರುಗಳಿಗೆ ಎ.ಜಿ.ಪಿ. ರೂ.7000/- ಮಂಜೂರು ಮಾಡುವಂತೆ ಕೋರಿರುತ್ತಾರೆ.

...2

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 31 ಜನ ಸಹಾಯಕ ಪ್ರಾಧ್ಯಾಪಕರು/ ಸಹಾಯಕ ನಿರ್ದೇಶಕರು/ ದೈಹಿಕ ಶಿಕ್ಷಕರು/ ಗ್ರಂಥಪಾಲಕರುಗಳ ಪೈಕಿ ಅರ್ಹರಿರುವ 22 ಜನ ಬೋಧಕರುಗಳಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆ(CAS)ಯಡಿ 6ನೇ ಎಐಸಿಟಿಇ ವೇತನ ಶ್ರೇಣಿ ರೂ.15600-39100+ಎಜಿಪಿ ರೂ.6000 ರಿಂದ ವೇತನ ಶ್ರೇಣಿ ರೂ.15600-39100 + ಎಜಿಪಿ ರೂ.7000ಕ್ಕೆ ವೃತ್ತಿ ಪದೋನ್ನತಿ ನೀಡಲು ಸರ್ಕಾರವು ತೀರ್ಮಾನಿಸಿದ್ದು, ಅದರಂತೆ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 75 ಟಿಇಸಿ 2024**
**ಬೆಂಗಳೂರು, ದಿನಾಂಕ:16.03.2024**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಆದೇಶದ **ಅನುಬಂಧ**ದಲ್ಲಿರುವಂತೆ 18 ಸಹಾಯಕ ಪ್ರಾಧ್ಯಾಪಕರು ಮತ್ತು 4 ಗ್ರಂಥಪಾಲಕರುಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ(CAS) 6ನೇ ಎಐಸಿಟಿಇ ವೇತನ ಶ್ರೇಣಿ ರೂ.15600-39100+ ಎ.ಜಿ.ಪಿ. ರೂ.6000/-ರಿಂದ ರೂ.15600-39100+ಎಜಿಪಿ ರೂ.7000/-ರಲ್ಲಿ ಎ.ಜಿ.ಪಿಯನ್ನು ಮಂಜೂರು ಮಾಡಿ ಆದೇಶಿಸಿದೆ.

**ಷರತ್ತುಗಳು:**

i. 2010 ಮತ್ತು 2012ರ ಎಐಸಿಟಿಇ ರೆಗ್ಯುಲೇಷನ್‌ಗಳನ್ವಯ ಎ.ಜಿ.ಪಿ ಮಂಜೂರಾತಿಯು ಸರ್ಕಾರದ ಮಾರ್ಗಸೂಚಿ/ಆದೇಶಗಳಲ್ಲಿನ ನಿಬಂಧನೆಗೊಳಪಟ್ಟಿರುತ್ತದೆ.

ii. ಎ.ಜಿ.ಪಿ ಮಂಜೂರಾತಿಯು ಎಐಸಿಟಿಇ/ಯುಜಿಸಿ/ಸರ್ಕಾರ/ಇಲಾಖೆ ಕಾಲಕಾಲಕ್ಕೆ ಹೊರಡಿಸಿರುವ ಆದೇಶ/ಸುತ್ತೋಲೆ/ಪತ್ರಗಳಲ್ಲಿ ನಿಗದಿಪಡಿಸಿರುವ ಷರತ್ತು/ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

iii. ಸದರಿಯವರು ಸಿಎಎಸ್‌ರಡಿ ಎ.ಜಿ.ಪಿ.ಗೆ ಅರ್ಹತೆ ಹೊಂದಿದ ದಿನಾಂಕದಿಂದ ಸೇವಾ ಜೇಷ್ಠತೆಯನ್ನು ಪರಿಗಣಿಸುವುದು ಹಾಗೂ ಆರ್ಥಿಕ ಸೌಲಭ್ಯವನ್ನು ಈ ಆದೇಶವನ್ನು ಹೊರಡಿಸಿದ ದಿನಾಂಕ:16.03.2024ರಿಂದ ಅನ್ವಯವಾಗುವಂತೆ ಭವಿಷ್ಯವರ್ತಿಯಾಗಿ ಜಾರಿಗೊಳಿಸುವುದು.

iv. ಸದರಿಯವರ ವೇತನ ಶ್ರೇಣಿಯನ್ನು 7ನೇ ಎಐಸಿಟಿಇ ಪರಿಷ್ಕೃತ ವೇತನ ಶ್ರೇಣಿಯಡಿ ಸಂವಾದಿಯಾಗಿ ನಿಗದಿಪಡಿಸಲು ನಿಯಮಾನುಸಾರ ಅಗತ್ಯ ಕ್ರಮವಹಿಸುವುದು.

v. ಸದರಿ ಬೋಧಕ ಸಿಬ್ಬಂದಿಗಳು ಸಿಎಎಸ್ ಮುಂಬಡ್ತಿಗೆ ಎಲ್ಲಾ ರೀತಿಯಲ್ಲೂ ಅರ್ಹತೆಯನ್ನು ಹೊಂದಿರುವ ಬಗ್ಗೆ ಸ್ಥಾನೀಕರಣ ಆಯ್ಕೆ ಸಮಿತಿಯು ಮಾಡಿರುವ ಶಿಫಾರಸ್ಸಿನಂತೆ ಪರಿಗಣಿಸಲಾಗಿದೆ.

vi. ಸದರಿ ಬೋಧಕ ಸಿಬ್ಬಂದಿಗಳ ಪ್ರಸ್ತಾವನೆಯಲ್ಲಿ ಯಾವುದೇ ತಪ್ಪು ಮಾಹಿತಿಯನ್ನು ಒದಗಿಸಿರುವುದು ಕಂಡು ಬಂದಲ್ಲಿ ಸದರಿಯವರುಗಳ ಎ.ಜಿ.ಪಿ ಮಂಜೂರಾತಿಯನ್ನು ಯಾವುದೇ ಮುನ್ಸೂಚನೆ ನೀಡದೇ ಹಿಂಪಡೆಯಲಾಗುವುದು ಹಾಗೂ ತಪ್ಪು ಮಾಹಿತಿ ಒದಗಿಸಿದವರ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

vii. ಈ ಆದೇಶದನ್ವಯ ಮಂಜೂರು ಮಾಡಲಾಗುವ ಎ.ಜಿ.ಪಿ ಸೌಲಭ್ಯವನ್ನು ಸ್ಥಳೀಯ/ಮಹಾಲೇಖಪಾಲರ ಲೆಕ್ಕಪರಿಶೋಧನೆಗೆ ಒಳಪಡಿಸಿದಾಗ ಯಾವುದೇ ಅಸಂಗತಗಳು ಕಂಡುಬಂದಲ್ಲಿ ಮರು ಪರಿಶೀಲಿಸುವ ಮತ್ತು ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

viii. ಎಜಿಪಿ ಮಂಜೂರಾತಿ ವಿವರಗಳನ್ನು ಸದರಿ ಬೋಧಕ ಸಿಬ್ಬಂದಿಗಳ ಸೇವಾ ಪುಸ್ತಕದಲ್ಲಿ ನಮೂದಿಸುವುದು.

...3

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಇ 51 ವೆಚ್ಚ-8 2023, ದಿನಾಂಕ:03.03.2023ರಲ್ಲಿ ನೀಡಿರುವ ಅಭಿಪ್ರಾಯದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

16/3/2024

(ಮಹಾಂತೇಶಪ್ಪ ಎಸ್.ತುರಕನೂರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ)

16.3.24

ಇವರಿಗೆ:

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಪ್ರಾಂಶುಪಾಲರು, ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು(ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರ ಮುಖಾಂತರ)
5. ಸಂಬಂಧಪಟ್ಟ ಸಹಾಯಕ ಪ್ರಾಧ್ಯಾಪಕರುಗಳಿಗೆ, ಗ್ರಂಥಪಾಲಕರುಗಳಿಗೆ (ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರ ಮುಖಾಂತರ)

ಪ್ರತಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ
2. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ
3. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರ
ಆಪ್ತ ಶಾಖೆ.
ಸಂಖ್ಯೆ.................
18 MAR 2024

# ಅನುಬಂಧ

**(ಸರ್ಕಾರದ ಆದೇಶ ಸಂಖ್ಯೆ:ಇಡಿ 75 ಟಿಇಸಿ 2024, ದಿನಾಂಕ:16.03.2024)**

| ಕ್ರ.ಸಂ. | ಹೆಸರು, ಪದನಾಮ ಮತ್ತು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ | ಸೇವೆಗೆ ಸೇರಿದ ದಿನಾಂಕ | ಸಿ.ಎ.ಎಸ್ ರಡಿ ಮುಂಬಡ್ತಿಗೆ ಅರ್ಹತೆ ಹೊಂದಿದ ದಿನಾಂಕ |
|---|---|---|---|
| | **ಯಾಂತ್ರಿಕ ವಿಭಾಗ** | | |
| 1 | ಡಾ. ಬಣಜಾರ ಕೊಟ್ರೇಶ,<br>ಸಹಾಯಕ ಪ್ರಾಧ್ಯಾಪಕರು,<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್, ಹಾವೇರಿ | 18.03.2011 | 18.03.2016 |
| 2 | ಡಾ. ಹೆಚ್.ಎಂ.ಮಲ್ಲಿಕಾರ್ಜುನ<br>ಸಹಾಯಕ ಪ್ರಾಧ್ಯಾಪಕರು,<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್, ಚಾಮರಾಜನಗರ | 11.03.2011 | 11.03.2016 |
| 3 | ಡಾ. ವಿನಯ್ ಎಸ್.ಎಸ್.<br>ಸಹಾಯಕ ಪ್ರಾಧ್ಯಾಪಕರು,<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್, ಮೊಸಳೆಹೊಸಳ್ಳಿ | 14.03.2011 | 14.03.2016 |
| 4 | ಸುನಿತ ವಿ.<br>ಸಹಾಯಕ ಪ್ರಾಧ್ಯಾಪಕರು,<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್, ರಾಮನಗರ | 18.03.2011 | 18.03.2017 |
| 5 | ಡಾ. ಮಂಜುನಾಥ ಕೆ.<br>ಸಹಾಯಕ ಪ್ರಾಧ್ಯಾಪಕರು,<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್, ಹಾಸನ | 16.03.2011 | 16.03.2016 |
| 6 | ಅಮಿತ್ ಕುಮಾರ್<br>ಸಹಾಯಕ ಪ್ರಾಧ್ಯಾಪಕರು,<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್, ರಾಯಚೂರು | 18.03.2011 | 18.03.2016 |
| 7 | ಗೀತಾ ಹೆಚ್.ಆರ್.<br>ಸಹಾಯಕ ಪ್ರಾಧ್ಯಾಪಕರು,<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್, ಕೆ.ಆರ್.ಪೇಟೆ | 18.03.2011 | 18.03.2016 |
| 8 | ಪುಷ್ಪಾವತಿ ಎಸ್.ಎಂ.<br>ಸಹಾಯಕ ಪ್ರಾಧ್ಯಾಪಕರು,<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್, ಚಾಮರಾಜನಗರ | 25.05.2011 | 25.05.2016 |
| 9 | ಮನಿಲ್ ರಾಜ್<br>ಸಹಾಯಕ ಪ್ರಾಧ್ಯಾಪಕರು,<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್, ಚಾಮರಾಜನಗರ | 07.03.2011 | 07.03.2016 |
| 10 | ಮಲ್ಲಿಕಾರ್ಜುನ ಸ್ವಾಮಿ ಆರ್.<br>ಸಹಾಯಕ ಪ್ರಾಧ್ಯಾಪಕರು,<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್, ಚಳ್ಳಕೆರೆ | 10.03.2011 | 10.03.2016 |
| 11 | ದಿನೇಶ್ ಎಂ.ಹೆಚ್.<br>ಸಹಾಯಕ ಪ್ರಾಧ್ಯಾಪಕರು,<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್, ಹಾಸನ | 18.03.2011 | 18.03.2016 |
| 12 | ಮಂಜುನಾಥ್ ಯಾದವ್ ಎಸ್.<br>ಸಹಾಯಕ ಪ್ರಾಧ್ಯಾಪಕರು,<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್, ಗಂಗಾವತಿ | 10.03.2011 | 10.03.2016 |
| | **ಸಿವಿಲ್ ವಿಭಾಗ** | | |
| 13 | ಅಫ್‌ರೋಜ್‌ಖಾನ್<br>ಸಹಾಯಕ ಪ್ರಾಧ್ಯಾಪಕರು,<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್, ಗಂಗಾವತಿ | 31.03.2011 | 31.03.2016 |
| 14 | ಎ. ಸತ್ಯನಾರಾಯಣ<br>ಸಹಾಯಕ ಪ್ರಾಧ್ಯಾಪಕರು,<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್, ಹಾಸನ | 08.04.2011 | 08.04.2016 |
| 15 | ಮಂಜುನಾಥ್ ಹೆಚ್. ಆರ್.<br>ಸಹಾಯಕ ಪ್ರಾಧ್ಯಾಪಕರು,<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್, ಹಾಸನ | 01.04.2011 | 01.04.2016 |
| 16 | ಡಾ. ತೇಜಸ್ವಿನಿ ಆರ್.ಎಂ.<br>ಸಹಾಯಕ ಪ್ರಾಧ್ಯಾಪಕರು,<br>ಸರ್ಕಾರಿ ಎಸ್‌ಕೆಎಸ್‌ಜೆಟಿಐ, ಬೆಂಗಳೂರು | 08.04.2011 | 08.04.2016 |

| | | | |
|---|---|---|---|
| **ರಸಾಯನ ಶಾಸ್ತ್ರ** | | | |
| 17 | ಮಾಧುರಿ ಆರ್.<br>ಸಹಾಯಕ ಪ್ರಾಧ್ಯಾಪಕರು,<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್, ಹಾಸನ | 12.09.2013 | 12.09.2018 |
| **ಗ್ರಂಥಪಾಲಕರು** | | | |
| 18 | ಪರಮೇಶ ಎಸ್.<br>ಗ್ರಂಥಪಾಲಕರು<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್, ರಾಮನಗರ | 08.11.2010 | 08.11.2016 |
| 19 | ಸತೀಶ ಎಂ.ವಿ.<br>ಗ್ರಂಥಪಾಲಕರು<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್, ಕೆ.ಆರ್.ಪೇಟೆ | 04.11.2010 | 04.11.2016 |
| 20 | ಬಲಭೀಮ<br>ಗ್ರಂಥಪಾಲಕರು<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್, ರಾಯಚೂರು | 11.11.2010 | 11.11.2016 |
| 21 | ಪುಟ್ಟತಾಯಮ್ಮ ಕೆ.<br>ಗ್ರಂಥಪಾಲಕರು<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್, ಹಾಸನ | 27.10.2010 | 27.10.2016 |
| **ಗಣಿತ ವಿಭಾಗ** | | | |
| 22 | ಲೀನಾ ಮರಿಯ ಎಸ್.<br>ಸಹಾಯಕ ಪ್ರಾಧ್ಯಾಪಕರು,<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್, ಹಾಸನ | 08.03.2011 | 08.03.2016 |

(ಮಹಾಂತೇಶಪ್ಪ ಎಸ್.ತುರಕನೂರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ)